

# ಬದುಕು ನುಂಗಿತು ಕಲ್ಲಿದ್ದಲು ಮಸಿ



ಜಾರ್ಖಂಡ್‌ನ ಧನಬಾದ್‌ನ ಝುರಿಯಾ, ಕಲ್ಲಿದ್ದಲಿನ ನಿಕ್ಷೇಪದಿಂದ ದೇಶದ ಗಮನಸೆಳೆದಿರುವ ಪ್ರದೇಶ. ನೂರು ವರ್ಷಗಳು ತುಂಬಿರುವ ಇಲ್ಲಿನ ಕಲ್ಲಿದ್ದಲ ಗಣಿಗಾರಿಕೆ ದೇಶದ ಔದ್ಯಮಿಕ ರಂಗದಲ್ಲಿ ಹೊಳಪು ತಂದಿರಬಹುದು. ಆದರೆ, ಇದ್ದಿಲಿನ ಮಸಿ ಸ್ಥಳೀಯ ಕಾರ್ಮಿಕರ ಬದುಕನ್ನು ಆವರಿಸಿಕೊಂಡಿದೆ.

■ ಎಸ್ಸೆನ್

ಹದಿನಾಲ್ಕು ವರ್ಷದ ಪಂಕಜ್ ಓದಿನಲ್ಲಿ ತುಂಬಾ ಜಾಣ. ಚೆನ್ನಾಗಿ ಓದಿ ಒಳ್ಳೆಯ ಕೆಲಸಕ್ಕೆ ಸೇರಬೇಕೆಂಬ ಕನಸನ್ನು ನನಸು ಮಾಡಿಕೊಳ್ಳಲು ಪ್ರತಿ ದಿನಾ ಸಂಜೆ ಅವನ ಕಾಲುಗಳು ಎಡತಾಕುತ್ತಿದ್ದುದು ಕಲ್ಲಿದ್ದಲಿನ ಗಣಿಯತ್ತ. ಒಂದು ಬ್ಯಾಗ್ ಕಲ್ಲಿದ್ದಲು ಆಯ್ದು ಪುಡಿಗಾಸು ದೊರೆತರೆ, ಮನೆಯವರಿಗೆ ಒಪ್ಪತ್ತಿನ ಊಟಕ್ಕಾದರೂ ಆಗಿ ಓದು ಮುಂದುವರಿಸಬಹುದೆಂಬ ಆಸೆ. ಹೀಗೇ ಒಂದು ಸಂಜೆ ಮಾಮೂಲಿನಂತೆ ಕಲ್ಲಿದ್ದಲು ಆಯಲು ಹೋದವನು ರಾತ್ರಿ ಕಳೆದರೂ ಮನೆಗೆ ಮರಳಿ ಬರಲೇ ಇಲ್ಲ. ಕಲ್ಲಿದ್ದಲಿನ ಗಣಿಯಲ್ಲಿ ಪಂಕಜ್ ಜೊತೆಗೆ ಅವನ ಕನಸೂ ಕಣ್ಮರೆಯಾಯಿತು. ಆದರೆ ಈ ಘಟನೆ ಆತನ ಮನೆಯವರ ಮನಸ್ಸನ್ನೇನೂ ಬದಲಿಸಿಲ್ಲ. ಅವನ ತಮ್ಮಂದಿರು ಈಗಲೂ ಈ ಗಣಿಯಲ್ಲಿ ಕಲ್ಲಿದ್ದಲು ಹೆಕ್ಕುತ್ತಾರೆ.

ಈಚೆಗೆ ನಡೆದ ಮತ್ತೊಂದು ಘಟನೆ. ಬಾಲೂರಗಡ ಗ್ರಾಮದಲ್ಲೊಂದು ತುಂಬು ಕುಟುಂಬ. ಹತ್ತು ಜನರೂ ರಾತ್ರಿ ಊಟ ಮುಗಿಸಿ ಹರಟೆಗೆ ಕೂತಿದ್ದಷ್ಟೆ. ನೋಡನೋಡುತ್ತಿದ್ದಂತೆ ಮನೆಯ ನೆಲ ಅದುರಲು ಆರಂಭಿಸಿತು. ಏನೆಂದು ನೋಡುವಷ್ಟರಲ್ಲೇ ಮನೆಗೆ ಮನೆಯೇ